

بِسۡمِ اللّٰہِ الرَّحۡمٰنِ الرَّحِیۡمِ

# ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉತ್ಕೃಷ್ಟ ಜೀವನ ಮಾದರಿಗಳನ್ನು ಅನುಸರಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **01–12–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ರಬೀಉಲ್ ಅವ್ವಲ್ ದಿನಾಂಕ 12 ಎಂತಹ ದಿನವೆಂದರೆ ಆ ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೆಂಬ ಪ್ರಕಾಶ ಲೋಕಕ್ಕೆ ಆಗಮಿಸಿತು. ಆ ಪ್ರಕಾಶವನ್ನು ಅಲ್ಲಾಹನು **ಸಿರಾಜುನ್ ಮುನೀರ** (ಪ್ರಕಾಶಮಾನವಾದ ದೀಪ) ಎಂದು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ. ಅದು ಸಕಲಲೋಕಗಳಿಗೆ ಆಧ್ಯಾತ್ಮಿಕ ಪ್ರಕಾಶ ನೀಡಲು ಆಗಮಿಸಿತು ಮತ್ತು ಪ್ರಕಾಶ ನೀಡಿತು. ಅಲ್ಲಾಹನ ರಾಜ್ಯಭಾರ ಲೋಕದಲ್ಲಿ ಸ್ಥಾಪಿಸಲು ಅದು ಆಗಮಿಸಿತು. ಅದು ಅಲ್ಲಾಹನ ರಾಜ್ಯಭಾರ ಸ್ಥಾಪಿಸಿತು. ವರ್ಷಗಟ್ಟಲೆ ಆಧ್ಯಾತ್ಮಿಕವಾಗಿ ಮೃತರಾಗಿದ್ದವರಿಗೆ ಅದು ಚೇತನ ನೀಡಲು ಆಗಮಿಸಿತು ಮತ್ತು ಚೇತನ ನೀಡಿತು. ಲೋಕಕ್ಕೆ ಆ ಪ್ರಕಾಶ, ಶಾಂತಿ ಮತ್ತು ಸಂರಕ್ಷಣೆ ನೀಡಲಿಕ್ಕೆ ಆಗಮಿಸಿತು ಮತ್ತು ಅದು ಶಾಂತಿ ಮತ್ತು ಸಂರಕ್ಷಣೆ ನೀಡಿತು. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದನು: **ವಮಾ ಅರ್‌ಸಲ್‌ನಾಕ ಇಲ್ಲಾ ರಹ್ಮತನ್‌ಲಿಲ್ ಆಲಮೀನ್.** ಲೋಕದ ಎಲ್ಲಾ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ.(21:108). ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮನುಷ್ಯರಿಗೆ ಮಾತ್ರವಲ್ಲ ಮೃಗಗಳಿಗೂ ಪಕ್ಷಿಗಳಿಗೂ ಅನುಗ್ರಹವಾಗಿದ್ದಾರೆ. ಅವರು ಕೇವಲ ಮುಸ್ಲಿಮರಿಗೆ ಮಾತ್ರವಲ್ಲ ಮುಸ್ಲಿಮೇತರರಿಗೂ ಅನುಗ್ರಹವಾಗಿದ್ದರು. ಮತ್ತು ಅನುಗ್ರಹವಾಗಿರುವರು. ಅವರ ಉಪದೇಶಗಳು ಖಿಯಾಮತ್ ತನಕ ಪ್ರತಿಯೊಬ್ಬನಿಗೆ ಅನುಗ್ರಹದಾಯಕವಾಗಿದೆ. ಅವರ ಬಗ್ಗೆ ಅವರನ್ನು ನಂಬುವವರೊಂದಿಗೆ ಅಲ್ಲಾಹನು ಹೇಳಿದ್ದಾನೆ, ನಿಮಗೆ ಅವರಲ್ಲಿ ಉತ್ತಮ ಮಾದರಿ ಇದೆ ಎಂದು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: **ಲಖದ್ ಕಾನಲಕುಮ್ ಫೀ ರಸೂಲಿಲ್ಲಾಹಿ ಉಸ್‌ವತುನ್ ಹಸನತುನ್ ಲಿಮನ್ ಕಾನ ಯರ್‌ಜುಲ್ಲಾಹ ವಲ್ ಯೌಮಲ್ ಆಖಿರ ವಝಕರಲ್ಲಾಹ ಕಸೀರಾ.** ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕರಲ್ಲಿ ಒಂದು ಉತ್ತಮ ಮಾದರಿ ಇದೆ – ಅಲ್ಲಾಹ್ ಮತ್ತು ಅಂತ್ಯದಿನದ (ಭೇಟಿಯ) ಬಗ್ಗೆ ನಿರೀಕ್ಷೆಯಿರುವವರಿಗೆ ಹಾಗೂ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರಿಗೆ. (33:22).

ಈ ಉತ್ತಮ ಮಾದರಿಯನ್ನು ಅನುಸರಿಸಿ ವರ್ತಿಸದಿದ್ದರೆ ಮುಸ್ಲಿಮನು ಮುಸ್ಲಿಮನೆಂದು ಕರೆಯಲ್ಪಡಲಾರನು. ನಮ್ಮ ಪೈಗಂಬರ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಏಕದೇವ ವಿಶ್ವಾಸ (ತೌಹೀದ್) ಸ್ಥಾಪಿಸುವುದು ಹೇಗೆಂದು ತೋರಿಸಿಕೊಟ್ಟರು. ಆರಾಧನೆಯ ಮಾದರಿಯನ್ನು ತೋರಿಸಿಕೊಟ್ಟರು. ಉನ್ನತ ಸ್ವಭಾವ ಗುಣದ ಮಾದರಿ ತೋರಿಸಿಕೊಟ್ಟರು. **ಹುಖೂಖುಲ್ ಇಬಾದ್** ಜನರ ಹಕ್ಕುಗಳನ್ನು ಈಡೇರಿಸುವುದು ಹೇಗೆಂದು ತೋರಿಸಿಕೊಟ್ಟರು. ಆದರೆ ದುರಾದೃಷ್ಟವಶಾತ್ ಇಂದಿನ ಕಾಲದ ಮುಸ್ಲಿಮರಲ್ಲಿ ಬಹುತೇಕ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಿರುವುದಾಗಿ ವಾದಿಸುತ್ತಿರುವರಾದರೂ ಅವರ ವರ್ತನೆಗಳು ಅದಕ್ಕೆ ವಿರುದ್ಧವಾಗಿ ಇವೆ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ಉಪದೇಶಗಳಿಗೆ ವಿರುದ್ಧವಾಗಿ, ಅವರು ತೋರಿಸಿಕೊಟ್ಟ ಮಾದರಿ ನಡೆವಳಿಕೆಗಳಿಗೆ ವಿರುದ್ಧವಾಗಿ ಇಂದಿನ ಕಾಲದ ಮುಸ್ಲಿಮರಲ್ಲಿ ಬಹುತೇಕ ಜನರು ವರ್ತಿಸುತ್ತಿದ್ದಾರೆ. ಬಹುತೇಕ ಮುಸ್ಲಿಮ್ ದೇಶಗಳಲ್ಲಿ ಗಲಬೆಗೊಂದಲಗಳ ಪರಿಸ್ಥಿತಿ ಇದೆ. ಪಾಕಿಸ್ಥಾನದ ಸ್ಥಿತಿ ಹೇಗಿದೆ ಎಂದರೆ ಗಲಬೆ ಗೊಂದಲಗಳ ಅಗ್ನಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಬ್ಬುವ ಭಯದಿಂದ ಕೆಲವು ನಗರಗಳಲ್ಲಿ ಮೊಬೈಲ್ ಸೇವೆಯನ್ನು ಬಂದು ಮಾಡಲಾಗಿದೆ. ಪೋಲೀಸರು ಅಧಿಕ ಸಂಖ್ಯೆಯಲ್ಲಿ ಪ್ರತಿಯೊಂದು ನಗರ ವೃತ್ತಗಳಲ್ಲೂ ಮಾರ್ಗಗಳಲ್ಲೂ ನಿಂತಿರುತ್ತಾರೆ. ಏನು, ಇದು ನಮ್ಮ ಪೈಗಂಬರರ ಜನ್ಮ ದಿನದ ಸಂತೋಷವನ್ನು ಪ್ರಕಟಿಸಬೇಕಾದ ರೀತಿಯೇ? ಪ್ರತಿಯೊಬ್ಬ ಸಭ್ಯ ವ್ಯಕ್ತಿ ಭಯಭೀತನಾಗಿದ್ದಾನೆ. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಲ್ಲಿ ಅಹ್ಮದಿಯರ ವಿರುದ್ಧ ಬೈಗಳನ್ನು ಸುರಿಸುವುದು ಮತ್ತು ಕೊಳಕನ್ನು ಬೊಗಳುವುದು ಈ ಜನರ ದೈನಂದಿನ ರೂಢಿಯಾಗಿದೆ. ಈ ದಿನದಂದು ಇದು ಇನ್ನಷ್ಟು ತೀವ್ರವಾಗಿರುತ್ತದೆ.

ಕೆಲವು ದಿನಗಳ ಹಿಂದೆ ಪಾಕಿಸ್ಥಾನದ ಅನೇಕ ನಗರಗಳನ್ನು ಗೇರಾವ್ ಮಾಡಲಾಯಿತು. ಅವರು ಧರಣಿ ಕುಳಿತರು. ಪ್ರತಿಯೊಬ್ಬ ಸಭ್ಯ ನಾಗರಿಕನಿಗೆ ಇದರಿಂದ

ಬಹಳಷ್ಟು ತೊಂದರೆಯಾಯಿತು. ವ್ಯಾಪಾರ ವಹಿವಾಟು ಸ್ಥಗಿತಗೊಂಡಿತು. ರೋಗಿಗೆ ಆಸ್ಪತ್ರೆಗೆ ಹೋಗಲು ಸಾಧ್ಯವಾಗಲಿಲ್ಲ. ಶಾಲೆಗಳು ಮುಚ್ಚಲ್ಪಟ್ಟವು. ಅಂಗಡಿಗಳು ಸಹ ಮುಚ್ಚಲ್ಪಟ್ಟವು. ಮನೆಯಲ್ಲಿ ಆಹಾರ ಸಾಮಗ್ರಿಗಳಿಲ್ಲದ ಜನರು ತಮ್ಮ ಮಕ್ಕಳಿಗೆ ತಿನ್ನಿಸಲು ಆಹಾರ ಸಾಮಗ್ರಿ ತರಲು ಸಾಧ್ಯವಿರಲಿಲ್ಲ. ಶತಕೋಟಿಗಳಷ್ಟು ಹಾನಿ ದೇಶಕ್ಕೆ ಉಂಟಾಯಿತು. ಇವೆಲ್ಲಾ ಮತಪಂಡಿತರೆಂಬ ನಾಮಧೇಯರಾದ ಜನರ **ಹುಬ್ಬೇ ರಸೂಲ್** (ರಸೂಲರೊಂದಿಗೆ ಪ್ರೀತಿ) ಎಂಬ ಘೋಷಣೆಯ ಕಾರಣದಿಂದ ಸಂಭವಿಸಿದುವು. ಆದರೆ **ರಹ್ಮತುನ್‌ಲಿಲ್ ಆಲಮೀನ್** ಆಗಿರುವ ಅವರು ನಮಗೆ ಉಪದೇಶಿಸಿರುವುದು ಮಾರ್ಗಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಿರಿ ಎಂದು. ಆದರೆ ಈ ಜನರು **ನಾಮೂಸೆ ರಿಸಾಲತ್** (ಪ್ರವಾದಿತ್ವದ ಅಭಿಮಾನದ) ಹೆಸರಲ್ಲಿ ಮಾರ್ಗಗಳನ್ನು ಮುಚ್ಚಿಬಿಟ್ಟು ಜನರಿಗೆ ಕಷ್ಟ ನೀಡುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶ ಮತ್ತು ಅವರ ನಡೆವಳಿಕೆಗಳಿಗೆ ಈ ಜನರ ವರ್ತನೆಯೊಂದಿಗೆ ದೂರದ ಸಂಬಂಧವೂ ಇಲ್ಲ.

ಈ ಜನರು ಏನು ಬೇಕಾದರೂ ಮಾಡುತ್ತಲಿರಲಿ. ಆದರೆ ಅಹ್ಮದಿಯರಾದ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಯ ಪ್ರತಿಯೊಂದು ಪಾರ್ಶ್ವವನ್ನು ನೋಡಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಲು ಪೂರ್ಣ ಪ್ರಯತ್ನ ಮಾಡಬೇಕು. ನಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಅವುಗಳನ್ನು ಅನುಷ್ಠಿಸಬೇಕು. ಈಗ ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿ ನಡೆವಳಿಕೆಗೆ ಸಂಬಂಧಿಸಿ ಅವರ ಜೀವಿತದ ಕೆಲವು ಪಾರ್ಶ್ವಗಳನ್ನು ವಿವರಿಸುವೆನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನೊಂದಿಗೆ ಹೊಂದಿದ್ದ ಪ್ರೀತಿಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಈ ರೀತಿ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನನ್ನು ಅತ್ಯಧಿಕ ಪ್ರೀತಿಸುವವರಾಗಿ, ಪ್ರೇಮ ಭರಿತರಾಗಿ, ಅದರಲ್ಲೇ ಉನ್ಮತ್ತರಾಗಿ ಲೋಕದಲ್ಲಿ ಬೇರೆ ಯಾರಿಗೂ ಸಿಗದ ಅನುಗ್ರಹಗಳನ್ನು ಗಳಿಸಿದರು. ಅವರಿಗೆ ಅಲ್ಲಾಹನೊಂದಿಗೆ ಎಂತಹ ಪ್ರೇಮವಿತ್ತೆಂದರೆ ಸಾಮಾನ್ಯ ಜನರು ಸಹ ಹೇಳುತ್ತಿದ್ದರು– **ಆಶಿಖ ಮುಹಮ್ಮದುನ್ ಅಲಾ ರಬ್ಬಿಹೀ** ಎಂದರೆ ಮುಹಮ್ಮದ್ ತನ್ನ ಪ್ರಭುವಾದ ಅಲ್ಲಾಹನನ್ನು ಪ್ರೇಮಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣಗೊಂಡು ಅವುಗಳಲ್ಲಿ ಬಹುದೇವಾರಾಧಕರನ್ನು **ರಿಜ್‌ಸ್** (ಅಶುದ್ಧರು), **ಶರ್‌ರುಲ್ ಬರಿಯ್ಯಾ** (ನಿಕೃಷ್ಟ ಜೀವಿಗಳು), **ಸುಫಹಾ** (ತಿಳಿಗೇಡಿಗಳು), **ಝುರ್ರಿಯತು ಶೈತಾನ್** (ಶೈತಾನನ ಸಂತಾನ) ಎಂದೂ ಅವರ ಆರಾಧ್ಯ ದೈವಗಳನ್ನು **ವಖೂದುನ್ನಾರ್** (ನರಕಾಗ್ನಿಯ ಇಂಧನ), **ಹಸಬು ಜಹನ್ನಮ್** (ನರಕದ ಇಂಧನ) ಎಂದೆಲ್ಲಾ ವರ್ಣಿಸಿದಾಗ ಅಬೂತಾಲಿಬರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕರೆದು ಹೇಳಿದರು, ಓ ನನ್ನ ಸಹೋದರ ಪುತ್ರ ನೀನು ಮಾಡುತ್ತಿರುವ ನಿಂದನೆಗಳಿಂದ ನಮ್ಮ ಸಮುದಾಯ ಕಠಿಣವಾಗಿ ಉದ್ರೇಕಿಸಲ್ಪಟ್ಟಿದೆ. ಅವರು ನಿನ್ನನ್ನು ಬೇಗನೆ ನಾಶ ಮಾಡಬಹುದು ಮತ್ತು ನಿನ್ನೊಂದಿಗೆ ನನ್ನನ್ನೂ ಸಹ. ನೀನು ಅವರ ಬುದ್ಧಿಶಾಲಿಗಳನ್ನು ತಿಳಿಗೇಡಿಗಳೆಂದು ಕರೆದಿರುವೆ. ಅವರ ಹಿರಿಯರನ್ನು ನಿಕೃಷ್ಟ ಜೀವಿಗಳು ಎಂದು ಹೇಳಿರುವೆ. ಅವರ ಆದರಣೀಯ ದೈವಗಳನ್ನು ನರಕಾಗ್ನಿಯ ಸೌದೆ ಎಂದೂ ನರಕದ ಇಂಧನ ಎಂದೂ ಕರೆದಿರುವೆ. ನೀನು ಅವರನ್ನೆಲ್ಲಾ ಅಶುದ್ಧರೆಂದೂ, ಕೊಳಕರೆಂದೂ ಶೈತಾನನ ಸಂತಾನ ಎಂದೂ ಕರೆದಿರುವೆ. ನಾನು ನಿನ್ನ ಹಿತೈಷಿಯಾಗಿ ಹೇಳುತ್ತೇನೆ ನೀನು ನಿನ್ನ ನಾಲಗೆಯನ್ನು ಹಿಡಿದಿರಿಸು. ನಿಂದಿಸುವುದನ್ನು ಬಿಟ್ಟುಬಿಡು. ನನಗೆ ಸಮುದಾಯವನ್ನು ಎದುರಿಸುವ ಶಕ್ತಿ ಇಲ್ಲ ಎಂದು ಹೇಳಿದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಹೀಗೆ ಉತ್ತರ ನೀಡಿದರು: ಓ ನನ್ನ ಪ್ರಿಯ ಚಿಕ್ಕಪ್ಪ, ಇವುಗಳೆಲ್ಲಾ ನಿಂದನೆಗಳಲ್ಲ. ಅವುಗಳೆಲ್ಲಾ ವಾಸ್ತವಿಕ ಚಿತ್ರಗಳಾಗಿವೆ. ಅವರ ವಾಸ್ತವಿಕ ಸ್ಥಿತಿಯ ವಿವರಣೆಗಳಾಗಿವೆ. ನಾನು ಈ ಕೆಲಸಕ್ಕೋಸ್ಕರವೇ ಕಳುಹಿಸಲ್ಪಟ್ಟಿರುವೆನು. ಈ ಕೆಲಸ ಮಾಡುವಾಗ ನಾನು ಮೃತ್ಯುವನ್ನು ಎದುರಿಸಬೇಕಾಗಿ ಬಂದರೆ ನಾನು ಮೃತನಾಗಲೂ ಸಿದ್ಧನಾಗಿರುವೆನು. ನನ್ನ ಜೀವಿತ ಈ ಮಾರ್ಗದಲ್ಲಿ ಅರ್ಪಿತವಾಗಿದೆ. ನಾನು ಮೃತ್ಯುವಿಗೆ ಭಯಪಟ್ಟು ಸತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಲಾರೆ. ಓ ನನ್ನ ಚಿಕ್ಕಪ್ಪ, ನಿಮಗೆ ನಿಮ್ಮ ಬಲಹೀನತೆ ಮತ್ತು ಕಷ್ಟದ ಬಗ್ಗೆ ಚಿಂತೆ ಇರುವುದಾದರೆ ನೀವು ನನಗೆ ಆಶ್ರಯ ನೀಡುವುದರ ಹೊಣೆಗಾರಿಕೆಯನ್ನು ತ್ಯಜಿಸಿರಿ. ಅಲ್ಲಾಹನಾಣೆ ನನಗೆ ನಿಮ್ಮ ಆಶ್ರಯದ ಆವಶ್ಯಕತೆ ಇಲ್ಲ. ಅಲ್ಲಾಹನ ಆಜ್ಞೆಗಳನ್ನು ಜನರಿಗೆ ತಲಪಿಸುವುದರಿಂದ ನಾನು ಎಂದೂ ಹಿಂದೆ ಸರಿಯಲಾರೆ. ನನ್ನ ಯಜಮಾನನ ಆಜ್ಞೆಗಳು ನನಗೆ ನನ್ನ ಜೀವಕ್ಕಿಂತ ಹೆಚ್ಚು ಪ್ರಿಯಕರವಾಗಿವೆ. ನಾನು ಈ ಮಾರ್ಗದಲ್ಲಿ ಮೃತನಾಗುವುದಾದರೆ, ನಾನು ಇಚ್ಛಿಸುತ್ತೇನೆ – ಪದೇ ಪದೇ ಜೀವಂತನಾಗಿ ಮತ್ತೆ ಮತ್ತೆ ಈ ಮಾರ್ಗದಲ್ಲಿ ಮೃತನಾಗುತ್ತಾ ಇರಬೇಕೆಂದು. ಇದು ಭಯದ ಸನ್ನಿವೇಶವಲ್ಲ. ಈ ಮಾರ್ಗದಲ್ಲಿ ಕಷ್ಟ ಅನುಭವಿಸುವುದು ನನಗೆ ಅತ್ಯಂತ ಪ್ರಿಯಕರವಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಮಾತುಗಳನ್ನು ಹೇಳುತ್ತಿದ್ದಾಗ ಅವರ ಮುಖ ಸತ್ಯಸಂಧತೆ ಮತ್ತು ಪ್ರಕಾಶದಿಂದ ಭರಿತವಾಗಿತ್ತು. ಅವರ ಪ್ರಮಾಣಿಕತೆ ಪ್ರಕಟವಾಗುತ್ತಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮಾತುಗಳನ್ನು ಹೇಳಿ ಮುಗಿಸಿದಾಗ ಸತ್ಯದ ಪ್ರಕಾಶವನ್ನು ಕಂಡು ಅಬೂತಾಲಿಬರ ಕಣ್ಣುಗಳಿಂದ ತಾನಾಗಿ ಅಶ್ರುಧಾರೆ ಹರಿಯಿತು. ಅವರು ಹೇಳಿದರು: ನಾನು ನಿನ್ನ ಉನ್ನತ ಸ್ಥಿತಿಯ ಬಗ್ಗೆ ತಿಳಿದಿರಲಿಲ್ಲ. ನೀನು ಬೇರೇಯೇ ವರ್ಣದಲ್ಲಿ ಬೇರೇಯೇ ವೈಭವದಲ್ಲಿರುವೆ. ನೀನು ಹೋಗಿ ನಿನ್ನ ಕೆಲಸ ಮಾಡು. ನಾನು ಜೀವಿಸಿರುವ ತನಕ, ನನಗೆ ಶಕ್ತಿ ಇರುವ ತನಕ ನಾನು ನಿನಗೆ ಬೆಂಬಲ ನೀಡುವೆನು.

ಈಗ ನಮ್ಮ ಮೇಲೆ ಆರೋಪ ಹೊರಿಸಲಾಗುತ್ತದೆ, ನಾವು ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ನಂಬುತ್ತಿರುವುದರಿಂದ ನಾವು ಕಾಫಿರ್ ಆಗಿರುವೆವು ಎಂದು. ನಾನು ವಿವರಿಸಿದ ಈ ಘಟನೆ ನಾವು ಚರಿತ್ರೆಯಲ್ಲಿ ಓದುತ್ತಿದ್ದೇವೆ. ಮತ್ತು ಅದರ ಬಗ್ಗೆ ಆಲಿಸುತ್ತಾ ಇದ್ದೇವೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಘಟನೆಯನ್ನು ಎಷ್ಟು ಹೃದಯಸ್ಪರ್ಶಿಯಾಗಿ ವಿವರಿಸಿರುವರೆಂದರೆ, ಅದರ ಮೂಲಕ ಅವರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗಿದ್ದ ಪ್ರೇಮದ ಪ್ರಕಟಣೆಯೂ ಆಗುತ್ತಿದೆ. ಅದರೊಂದಿಗೆ ಅವರಿಗೆ ಅಲ್ಲಾಹನೊಂದಿಗಿದ್ದ ಪ್ರೇಮದ ಮಾರ್ಗವೂ ಕಾಣಿಸುತ್ತದೆ. ಆ ಮಾರ್ಗಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದರು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗಿದ್ದ ತನ್ನ ಪ್ರೇಮದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಯಾವಾಗಲೂ ಆಶ್ಚರ್ಯಭರಿತವಾದ ದೃಷ್ಟಿಯಿಂದ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ – ಅವರ ಮೇಲೆ ಸಾವಿರ ಸಾವಿರ ದುರೂದ್ ಪ್ರಾರ್ಥನೆಗಳು ಮತ್ತು ಸಲಾಮ್ – ಅವರು ಎಷ್ಟು ವೈಭವಶಾಲಿ ಅಂತಸ್ತನ್ನು ಗಳಿಸಿದ ಪ್ರವಾದಿಯಾಗಿದ್ದಾರೆಂದರೆ ಅವರ ಉನ್ನತ ಸ್ಥಾನದ ಔನ್ನತ್ಯವನ್ನು ತಿಳಿಯಲು ಸಾಧ್ಯವಿಲ್ಲ. ಅವರ ಪರಿಶುದ್ಧ ಪ್ರಭಾವವನ್ನು ಅಂದಾಜು ಮಾಡುವುದು ಮನುಷ್ಯನಿಗೆ ಸಾಧ್ಯವಾಗುವ ಕೆಲಸವಲ್ಲ. ಅವರ ಯೋಗ್ಯತೆಯನ್ನು ಅವರಿಗರ್ಹವಾದ ರೀತಿಯಲ್ಲಿ ಗುರುತಿಸಲಾಗಲಿಲ್ಲ ಎನ್ನುವುದು ದುಃಖಕರವಾಗಿದೆ. ಏಕದೇವ ವಿಶ್ವಾಸ ಲೋಕದಿಂದ ಕಣ್ಮರೆಯಾಗಿತ್ತು. ಅದನ್ನು ಲೋಕಕ್ಕೆ ಮರಳಿ ತಂದ ಪಹಿಲ್ವಾನರು ಅವರೇ ಆಗಿದ್ದಾರೆ. ಅವರು ಅಲ್ಲಾಹನನ್ನು ಅತ್ಯಂತ ಹೆಚ್ಚಾಗಿ ಪ್ರೀತಿಸಿದರು. ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಮಾನವರೊಂದಿಗೆ ಸಹಾನುಭೂತಿ ತೋರಿಸುವುದರಲ್ಲಿ ಅವರ ಜೀವಿತ ನಿರತವಾಗಿತ್ತು. ಅವರ ಹೃದಯದ ರಹಸ್ಯವನ್ನು ಅರಿತ ಅಲ್ಲಾಹನು ಅವರಿಗೆ ಎಲ್ಲಾ ಪ್ರವಾದಿಗಳಿಗಿಂತ ಹಾಗೂ ಹಿಂದಿನ ಮತ್ತು ಮುಂದಿನ ಎಲ್ಲಾ ಜನರಿಗಿಂತ ಶ್ರೇಷ್ಠತೆ ನೀಡಿದನು. ಅವರ ಇಚ್ಛೆಗಳನ್ನು ಅವರ ಜೀವಿತ ಕಾಲದಲ್ಲಿಯೇ ಈಡೇರಿಸಿಕೊಟ್ಟನು. ಅವರು ಎಲ್ಲಾ ಅನುಗ್ರಹಗಳ ಉದ್ಭವ ಸ್ಥಾನವಾಗಿದ್ದಾರೆ. ಅವರ ಅನುಗ್ರಹದಿಂದ ಅನುಗ್ರಹ ಪಡೆಯದೆ ಏನಾದರೂ ಶ್ರೇಷ್ಟತೆಯನ್ನು ಯಾರಾದರೂ ವಾದಿಸುವುದಾದರೆ ಅವನು ಮನುಷ್ಯನಲ್ಲ ಅವನು ಶೈತಾನನ ಸಂತಾನವಾಗಿದ್ದಾನೆ. ಏಕೆಂದರೆ ಪ್ರತಿಯೊಂದು ಅನುಗ್ರಹದ ಕೀಲಿಗೈ ಅವರಿಗೆ ಅಲ್ಲಾಹನು ನೀಡಿರುವನು. ಎಲ್ಲಾ ಜ್ಞಾನದ ಖಜಾನೆಗಳು ಅವರಿಗೆ ನೀಡಲ್ಪಟ್ಟಿವೆ. ಅವರ ಮುಖೇನ ಅನುಗ್ರಹ ಪಡೆಯದವನು ಶಾಶ್ವತವಾಗಿ ಅನುಗ್ರಹ ರಹಿತನಾಗುವನು. ನಾವು ಎಷ್ಟು ಮಾತ್ರಕ್ಕೂ ಏನೂ ಅಲ್ಲ. ನಮ್ಮ ವಾಸ್ತವಿಕ ಸ್ಥಿತಿ ಏನು? ವಾಸ್ತವಿಕ ತೌಹೀದನ್ನು ಈ ಪ್ರವಾದಿಯಿಂದಲೇ ನಾವು ಗಳಿಸಿದೆವು ಎಂದು ಹೇಳದಿದ್ದರೆ ನಾವು ಅನುಗ್ರಹವನ್ನು ನಿರಾಕರಿಸುವವರಾಗುವೆವು. ನಮಗೆ ಜೀವಂತ ದೇವನ ಪರಿಚಯ ಆ ಪ್ರವಾದಿಯ ಮೂಲಕವೇ ಲಭಿಸಿತು. ಅವರ ಪ್ರಕಾಶದಿಂದ ಲಭಿಸಿತು. ಅಲ್ಲಾಹನ ಸಸಂದೇಶವಾಣಿಯ ಅನುಗ್ರಹ ನಮಗೆ ಲಭಿಸಿರುವುದು ಮತ್ತು ಆ ಮಹೋನ್ನತನಾದ ಅಲ್ಲಾಹನ ವದನವನ್ನು ನಾವು ದರ್ಶಿಸಿರುವುದು ಈ ವೈಭವಶಾಲಿ ಪ್ರವಾದಿಯ ಮೂಲಕವೇ ಆಗಿದೆ. ಮಾರ್ಗದರ್ಶನದ ಸೂರ್ಯನ ಕಿರಣಗಳು ಬಿಸಿಲಿನ ಹಾಗೆ ನಮ್ಮ ಮೇಲೆ ಬೀಳುತ್ತಿವೆ. ನಾವು ಅದರ ಎದುರಿಗೆ ನಿಂತಿರುವಾಗಲೇ ನಾವು ಅದರಿಂದ ಪ್ರಕಾಶ ಗಳಿಸಬಲ್ಲೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಒತ್ತಿ ಹೇಳುತ್ತೇನೆ. ಒಬ್ಬನು ಎಷ್ಟು ಕಠಿಣ ಶತ್ರುವಾಗಿದ್ದರೂ, ಅವನು ಕ್ರೈಸ್ತನೋ ಆರ್ಯ ಸಮಾಜಿಯೋ ಆಗಿದ್ದರೂ, ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ಮೊದಲಿನ ಅರಬ್ ದೇಶದ ಸ್ಥಿತಿಯನ್ನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಪ್ರಭಾದಿಂದ ಉಂಟಾದ ಬದಲಾವಣೆಗಳನ್ನು ನೋಡುವುದಾದರೆ, ಅವನು ತಾನಾಗಿಯೇ ಅವರ ಸತ್ಯತೆಯ ಬಗ್ಗೆ ಸಾಕ್ಷ್ಯ ನೀಡುವನು. ಅರಬ್ ದೇಶದ ಜನರ ಹಿಂದಿನ ಸ್ಥಿತಿಯ ಬಗ್ಗೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳಿದೆ: **ವ ಯಅ್‌ಕುಲೂನ ಕಮಾ ತಅ್‌ಕುಲುಲ್ ಅನ್‌ಆಮ್** ಮೃಗಗಳು ತಿಂದು ಜೀವಿಸುವ ಹಾಗೆ ಆ

ಜನರು ತಿಂದು ಜೀವಿಸುತ್ತಿದ್ದರು. ಅವರ ಸ್ಥಿತಿ ಮೃಗಗಳ ಸ್ಥಿತಿಯ ಹಾಗಿತ್ತು. ಇದು ಅವಿಶ್ವಾಸಿಗಳಾಗಿದ್ದಾಗ ಅರಬ್ ಜನರ ಸ್ಥಿತಿಯಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಭಾವದಿಂದ ಅವರಲ್ಲಿ ಬದಲಾವಣೆ ಉಂಟಾದಾಗ ಅವರ ಸ್ಥಿತಿ ಹೇಗಾಯಿತೆಂದರೆ **ಯಬೀತೂನ ಲಿರಬ್ಬಿಹಿಮ್ ಸುಜ್ಜದನ್ ವ ಖಿಯಾಮಾ** ಅವರು ತಮ್ಮ ಪ್ರಭುವಾದ ಅಲ್ಲಾಹನಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಮತ್ತು ನಿಂತುಕೊಂಡು ಪ್ರಾರ್ಥಿಸುತ್ತಾ ರಾತ್ರಿಯನ್ನು ಕಳೆಯುತ್ತಿದ್ದಾರೆ.

ಮೊದಲಿಗರಾದ ಆ ಸಹಾಬರೊಂದಿಗೆ ಸೇರಿರುವ ಕೊನೆಯವರಾದ ನಾವು ಸಹ ಅವರ ಹೆಜ್ಜೆ ಗುರುತುಗಳ ಪ್ರಕಾರ ನಡೆಯಬೇಕಾದುದು ಆವಶ್ಯಕವಾಗಿದೆ. ಯಾವ ರೀತಿ ಸಹಾಬರು ತಮ್ಮ ಆರಾಧನೆಯ ಮಟ್ಟವನ್ನು ಉನ್ನತಗೊಳಿಸಿದರೋ ಅದೇ ರೀತಿ ನಾವು ಸಹ ನಮ್ಮ ಆರಾಧನೆಯ ಮಟ್ಟವನ್ನು ಉನ್ನತಗೊಳಿಸಬೇಕಾಗಿದೆ. ನಾವು ಕೇವಲ ಲೌಕಿಕ ಕಾರ್ಯಗಳಲ್ಲಿಯೇ ಮುಳುಗಿದವರಾಗಬಾರದು. ಜಮಾಅತ್‌ಗಳ ಹಾಗೂ ಅಧೀನ ವಿಭಾಗಗಳ ವರದಿಗಳು ಬರುತ್ತಿವೆ – ನಮ್ಮಲ್ಲಿ ಇಂತಿಷ್ಟು ಶೇಕಡಾ ಜನರು ನಮಾಝ್ ನಿರ್ವಹಿಸುವವರಾದರು ಎಂದು. ನಲ್ವತ್ತು, ಐವತ್ತು ಅಥವಾ ಅರುವತ್ತು ಶೇಕಡ. ಆದರೆ, ನಮ್ಮಲ್ಲಿ ನೂರು ಶೇಕಡ ಜನರನ್ನೂ ಆರಾಧಕರನ್ನಾಗಿ ಮಾಡಿದ ಹೊರತು ನಾವು ನೆಮ್ಮದಿಯಿಂದಿರಲು ಸಾಧ್ಯವಿಲ್ಲ. ಜಮಾಅತ್ ವ್ಯವಸ್ಥೆ ಮಾತ್ರವಲ್ಲ, ಪ್ರತಿಯೊಬ್ಬ ವ್ಯಕ್ತಿಯೂ ತಾನು ಯಾವ ಮಟ್ಟದಲ್ಲಿದ್ದೇನೆ ಎಂದು ಪರಿಶೋಧಿಸಬೇಕಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧತೆ ಹೇಗಿತ್ತು ಎನ್ನುವುದರ ಬಗ್ಗೆ ಸಾಕ್ಷ್ಯವನ್ನು ಅವರ ಕಠಿಣ ಶತ್ರುವಾಗಿದ್ದ ನಝುರ್ ಬಿನ್ ಹಾರಿಸ್‌ನಿಂದ ಆಲಿಸಿರಿ. ಒಮ್ಮೆ ಖುರೈಶಿಗಳ ನಾಯಕರು ಒಟ್ಟಿಗೆ ಸೇರಿದ್ದರು. ಅವರಲ್ಲಿ ಅಬೂ ಜಹಲ್ ಮತ್ತು ನಝುರ್ ಬಿನ್ ಹಾರಿಸ್ ಸಹ ಇದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಜಾದೂಗಾರ ಅಥವಾ ಸುಳ್ಳುಗಾರ ಎಂದೆಲ್ಲಾ ಪ್ರಚಾರ ಮಾಡಬೇಕು ಎಂದು ಒಬ್ಬನು ಹೇಳಿದಾಗ ನಝುರ್ ಬಿನ್ ಹಾರಿಸ್ ನಿಂತುಕೊಂಡು ಹೇಳಿದರು: ಓ ಖುರೈಶಿಗಳೇ, ಈಗ ನಿಮ್ಮ ಮುಂದಿರುವುದು ನೀವು ಇದುವರೆಗೂ ಏನೊಂದು ಪರಿಹಾರವನ್ನೂ ಕಂಡುಕೊಳ್ಳಲು ಸಾಧ್ಯವಾಗದ ಅತಿದೊಡ್ಡ ಸಮಸ್ಯೆಯಾಗಿದೆ. ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ನಿಮ್ಮವನೇ ಆಗಿರುವ ನಿಮಗೆ ಅತ್ಯಂತ ಪ್ರಿಯವಾದ ತರುಣನಾಗಿದ್ದನು. ಅವರು ಸತ್ಯ ಹೇಳುವವರೂ ನಿಮ್ಮೆಲ್ಲರಿಗಿಂತ ಹೆಚ್ಚು ಪ್ರಾಮಾಣಿಕರೂ ಆಗಿದ್ದರು. ನೀವು ಹೇಳುತ್ತಿರುವಿರಿ ಅವರು ಜಾದೂಗಾರನೆಂದು. ನಾವು ಜಾದೂಗಾರರನ್ನು ಕಂಡಿದ್ದೇವೆ. ಆದರೆ ಇವರಲ್ಲಿ ನಾವು ಜಾದೂಗಾರಿಕೆ ಕಾಣುವುದಿಲ್ಲ. ನೀವು ಹೇಳುತ್ತಿರುವಿರಿ ಅವರು ಕಣಿ ಹೇಳುವವರೆಂದು. ನಾವು ಕಣಿ ಹೇಳುವವರನ್ನು ಕಂಡಿದ್ದೇವೆ. ಅವರು ಖಂಡಿತವಾಗಿಯೂ ಕಣಿ ಹೇಳುವ ಕಾಹಿನ್ ಅಲ್ಲ. ನೀವು ಹೇಳುತ್ತಿರುವಿರಿ ಅವರು ಕವಿ ಎಂದು. ನಾವು ಕವಿತೆಗಳನ್ನೆಲ್ಲಾ ನೋಡಿದ್ದೇವೆ. ಅವರು ಕವಿ ಅಲ್ಲ. ನೀವು ಹೇಳುತ್ತಿರುವಿರಿ ಅವರು ಹುಚ್ಚನೆಂದು. ಆದರೆ ಅವರಲ್ಲಿ ಹುಚ್ಚಿನ ಯಾವ ಲಕ್ಷಣವೂ ಇಲ್ಲ. ಓ ಖುರೈಶಿಗಳೇ, ನೀವು ಇನ್ನಷ್ಟು ಯೋಚಿಸಿರಿ. ನೀವು ಬಹಳ ದೊಡ್ಡದಾದೊಂದು ಸಮಸ್ಯೆಯನ್ನು ಎದುರಿಸುತ್ತಿರುವಿರಿ.

ಅಬೂ ಜಹಲನಿಗೆ ಅವರ ಸತ್ಯಸಂಧತೆಯನ್ನು ನಿರಾಕರಿಸಲಾಗಲಿಲ್ಲ. ಅನಂತರ ಅವನು ಹೇಳುತ್ತಿದ್ದನು: ನಾನು ನಿನ್ನನ್ನು ಸುಳ್ಳುಗಾರನೆಂದು ಹೇಳುವುದಿಲ್ಲ. ಆದರೆ ನೀನು ತಂದ ಉಪದೇಶಗಳು ತಪ್ಪಾಗಿವೆ. ಏಕೆಂದರೆ ನೀನು ನಮ್ಮ ವಿಗ್ರಹಗಳಿಗೆ ವಿರುದ್ಧವಾಗಿ ಮಾತನಾಡುತ್ತಿರುವೆ ಎಂದು. ಅಬೂ ಸುಫ್ಯಾನ್ ಸಹ ಹೆರ್ಕಲ್ ರಾಜನ ಆಸ್ಥಾನದಲ್ಲಿ ಹೇಳಿದ್ದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಳ್ಳು ಹೇಳುವವರಲ್ಲ ಅವರು ಯಾವಾಗಲೂ ಸತ್ಯ ಹೇಳಲು ಉಪದೇಶಿಸುತ್ತಾರೆ ಎಂದು. ಒಟ್ಟಿನಲ್ಲಿ, ಅತ್ಯಂತ ಕಠಿಣ ಶತ್ರುಗಳು ಸಹ ಅವರನ್ನು ಸುಳ್ಳುಗಾರನೆಂದು ಹೇಳಲಿಲ್ಲ. ಇದುವೇ ಅವರ ನುಬುವ್ವತ್ ಸತ್ಯವೆಂಬುದಕ್ಕೆ ಬಹಳ ದೊಡ್ಡ ಸಾಕ್ಷ್ಯಾಧಾರವಾಗಿದೆ. ಒಬ್ಬ ಯಹೂದಿ ವಿದ್ವಾಂಸ ಅವರ ಮುಖ ಚಹರೆ ನೋಡಿ ಹೇಳಿದ್ದರು– ಇದು ಒಬ್ಬ ಸುಳ್ಳುಗಾರನ ಮುಖಚರ್ಯೆ ಅಲ್ಲ ಎಂದು.

ಆದುದರಿಂದ ಅಹ್ಮದಿಯರಾದ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿ ನಡೆವಳಿಕೆಯನ್ನು ಅನುಸರಿಸಿ ನಡೆಯುತ್ತಾ ನಮ್ಮ ಸತ್ಯಸಂಧತೆಯ ಮಟ್ಟವನ್ನು ಯಾವಾಗಲೂ ಉನ್ನತಗೊಳಿಸಲು ಪ್ರಯತ್ನಿಸುತ್ತಾ ಇರಬೇಕು. ಆಗ ಇಸ್ಲಾಮಿನ ಸುಂದರ ತತ್ವಗಳನ್ನು ಹಬ್ಬಿಸಲು ಸುಲಭವಾಗುವುದು. ತಬ್ಲೀಗ್ ಮಾಡಲು ಆವಶ್ಯಕವಾಗಿರುವುದೇನೆಂದರೆ ಮಾತು ಮತ್ತು ಕೃತ್ಯಗಳು ಒಂದೇ ರೀತಿಯಲ್ಲಿರಬೇಕು. ನಮ್ಮ ಕೃತ್ಯಗಳಲ್ಲಿ ಸತ್ಯಸಂಧತೆ ಇಲ್ಲವಾದರೆ ಜನರು ಧಾರ್ಮಿಕ ಉಪದೇಶಗಳನ್ನು ಸುಳ್ಳೆಂದು ಭಾವಿಸುವರು. ಅಲ್ಲಾಹನ ಅಸ್ತಿತ್ವ ಸತ್ಯವಾಗಿದೆ. ಇಸ್ಲಾಮ್ ಧರ್ಮ ಸತ್ಯ ಧರ್ಮವಾಗಿದೆ. ಅದನ್ನು ಸತ್ಯದ ಮೂಲಕ ಹಬ್ಬಿಸುವುದು ನಮ್ಮ ಕೆಲಸವಾಗಿದೆ.

ಇಂದು ರಬೀಉಲ್ ಅವ್ವಲ್ 12ರಂದು ವಾಸ್ತವಿಕವಾಗಿ ಸಂತೋಷವನ್ನು ಆಚರಣೆ ಮಾಡುವುದಾದರೆ ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಯನ್ನು ಅನುಷ್ಠಾನಕ್ಕೆ ತಂದು ಸಂತೋಷವನ್ನು ಆಚರಿಸಬೇಕು. ಆರಾಧನೆಯ ಮಟ್ಟ ಉನ್ನತವಾಗಿರಬೇಕು. ಮತ್ತು ತೌಹೀದಿನ ಬಗ್ಗೆ ವಿಶ್ವಾಸ ಪರಿಪೂರ್ಣವಾಗಿರಬೇಕು. ಉತ್ತಮ ಸ್ವಭಾವ ಗುಣಗಳ ಮಟ್ಟವೂ ಉನ್ನತವಾಗಿರಬೇಕು. ನಮ್ಮ ಸ್ಥಿತಿ ಹೀಗಲ್ಲವಾದರೆ, ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿಯನ್ನು ಅನುಸರಿಸುವುದಿಲ್ಲವಾದರೆ ನಮ್ಮ ಮತ್ತು ಅನ್ಯರ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ. ಚದುರಿ ಹೋಗಿರುವ ಅನ್ಯ ಜನರು ತಾತ್ಕಾಲಿಕ ನಾಯಕರ ಮತ್ತು ಮತಪಂಡಿತರೆಂಬ ನಾಮಧೇಯರ ಹಿಂದೆ ಚಲಿಸುತ್ತಿದ್ದಾರೆ. ಮತ್ತು ಜನರಿಗೆ ತೊಂದರೆ ಉಂಟುಮಾಡುವ ಕೆಲಸಗಳನ್ನು ಮಾಡುತ್ತಿದ್ದಾರೆ. ನಾವು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿಯನ್ನು ಅನುಸರಿಸುವುದಿಲ್ಲವಾದರೆ ಅವರ ಮತ್ತು ನಮ್ಮ ಮಧ್ಯೆ ಯಾವುದೇ ವ್ಯತ್ಯಾಸವಿರಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದುದು ಆವಶ್ಯಪಡುವುದೇನೆಂದರೆ ನಾವು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿಯನ್ನು ನಮ್ಮ ಮುಂದಿರಿಸಬೇಕು. ನಮಗೆಲ್ಲರಿಗೂ ಅಲ್ಲಾಹನು ಹೀಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಅಮೇರಿಕದ ಫಿಲಡೆಲ್ಫಿಯಾದ ಸಿಸ್ಟರ್ ಸಲ್ಮಾ ಗನೀ ಸಾಹಿಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವುದಾಗಿ ಹೇಳಿ ಅವರ ಸದ್ಗುಣಗಳನ್ನು ವಿವರಿಸಿದರು.)

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 01-12-2017.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim | ***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon